

> ನನಗೆ ಯಾಕೋ ಪುಸ್ತಕ ಬರೀಬೇಕು ಅಂತ ಅನಿಸಲೇ ಇಲ್ಲ. ಬಹುಶಃ ಬೇರೆಯವರಿಗಾಗಿ ನಾನು ಬರಿಯಲ್ಲ.

ಹಾಗೆ. ನಾನು ಬೆಳೆದುಕೊಂಡು ಬಂದಿದ್ದು ಕವಿಯಾಗಿಯೂ ಹೌದು. ನೃತ್ಯಗಾರ್ತಿಯಾಗಿಯೂ ಹೌದು. ನೃತ್ಯದ ಕ್ರೆಡಿಟ್ ಕೂಡ ನನ್ನ ಅಮ್ಮನಿಗೆ ಸಲ್ಲಬೇಕು. ನಾನು ಚಿಕ್ಕೋಳಿದ್ದಾಗ ರೇಡಿಯೊದಲ್ಲಿ ಬರೋ ಹಾಡಿಗೆ ಡಾನ್ಸ್ ಮಾಡ್ತಾ ಇದ್ನಂತೆ. ಅದನ್ನ ನೋಡಿ ನಮ್ಮಮ್ಮ ನನಗೆ ನೃತ್ಯದಲ್ಲಿ ಆಸಕ್ತಿ ಇದೆ ಅಂತ ಡಾನ್ಸ್ ಕ್ಲಾಸಿಗೆ ಸೇರ್ಸಿದ್ರು ಅಂತ ಹೇಳ್ತಿರ್ತಾರೆ. ನೃತ್ಯ ನನ್ನನ್ನ ಬಿಡುಗಡೆಗೊಳಿಸುವಂತಹ ಒಂದು ಮಾಧ್ಯಮ. ಅಕ್ಷರದಲ್ಲಿ ನಾವು ಹೇಳಲಾಗದ್ದನ್ನ ನಮ್ಮ ಒಂದು ನೃತ್ಯಾಭಿವ್ಯಕ್ತಿ ಹೇಳುತ್ತೆ. ನಾನು ನೃತ್ಯದಲ್ಲಿ ಹಲವಾರು ಪ್ರಾಜೆಕ್ಟ್‌ಗಳನ್ನ ಮಾಡಿದೆ. 'ಅನ್ ಡ್ರೇಪಿಂಗ್ ಸೈಲೆನ್ಸ್', 'ಎಫ್–ಫೆಮಿನಿನಿಟಿ' ಮುಂತಾದ ಪ್ರೊಜೆಕ್ಟ್‌ಗಳನ್ನು ಮಾಡಿದೆ. ಕವಿತೆ ಮತ್ತು ನೃತ್ಯ ಎರಡನ್ನೂ ಬ್ಲೆಂಡ್ ಮಾಡಿದ ಒಂದು ಕಿರುಚಿತ್ರ ಕೂಡ 'ಬೆಂಗಳೂರು ಕ್ವೀರ್ ಫಿಲ್ಮ್ ಫೆಸ್ಟಿವಲ್'ನಲ್ಲಿ ಪ್ರದರ್ಶನ ಕಂಡಿತು. ಆಮೇಲೆ ನಾನು ಕವಿತೆಯನ್ನು ಸುಮ್ಮನೆ ಓದೋದಕ್ಕಿಂತ ಅದರಲ್ಲಿ ನೃತ್ಯವನ್ನೂ ಬೆರೆಸಿ ಸಂಯೋಜಿಸಿ ಪ್ರಸ್ತುತ ಪಡಿಸಿದೀನಿ. ಆ ರೀತಿ ಮಾಡಿದಾಗ ಸಹಜವಾಗಿಯೇ ಕವಿತೆಗೆ ಹಲವಾರು ಆಯಾಮಗಳು ಬಂದು ಸೇರಿಕೊಂಡಿವೆ.

◆ **ನೀವು ರಂಗಭೂಮಿಯಲ್ಲೂ ನಿಮ್ಮ ಹೆಜ್ಜೆಗುರುತುಗಳನ್ನು ಮೂಡಿಸಿದವರು. ಇತ್ತೀಚೆಗೆ ನೀವು ನಿರ್ದೇಶನ ಮಾಡಿದ ಏಕವ್ಯಕ್ತಿ ನಾಟಕವೊಂದು 'ಕೋರ್ಟ್‌ಯಾರ್ಡ್ ಆರ್ಟ್ ಸ್ಪೇಸ್, ಬೆಂಗಳೂರು'ನಲ್ಲಿ ಪ್ರದರ್ಶನಗೊಂಡಿತು. ಆ ಅನುಭವದ ಬಗ್ಗೆ ಹೇಳಿ. ಆಮೇಲೆ ನಿಮ್ಮ ಕಲಾ ಚಟುವಟಿಕೆಗಳಲ್ಲಿ ನನ್ನನ್ನು ಇನ್ನಿಲ್ಲದಂತೆ ಗಮನ ಸೆಳೆಯುವ ಅಂಶವೆಂದರೆ ನೀವು ತೆರೆದುಕೊಳ್ಳಲುಬಯಸುವ ಪ್ರತಿ ಕಲಾಮಾಧ್ಯಮದಲ್ಲೂ ಅದು ಬೇಡುವ ಕ್ರಾಫ್ಟನ್ನು ಕಲಿಯಲು ಕೂಡ ಮುತುವರ್ಜಿಯಿಂದ**